


ಬಲಿಯಾದರು ಎನ್ನುವ ದೂರನ್ನು ಅವನಿ ಹೊರಬೇಕಾಯಿತು; ಅವಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಾಯಿತು.

ಅವನಿಗೆ ಬೇರೆ ದಾರಿ ಯಾವುದಿತ್ತು? ತನ್ನ ಕಾಡನ್ನು ರಕ್ಷಿಸಿಕೊಳ್ಳುವುದು ಅವಳಿಗೆ ಅಗತ್ಯವಾಗಿತ್ತು ಹಾಗೂ ಅದು ಪ್ರಾಣಿಧರ್ಮವೂ ಆಗಿತ್ತು. ಆದರೆ, ಮನುಷ್ಯನ ಲೆಕ್ಕಾಚಾರದೆದುರು ಪ್ರಾಣಿಗಳ ಭಾವನೆಗಳಿಗೆ ಕಿಮ್ಮತ್ತೆಲ್ಲಿ? ಅವನಿಯ ಬೆನ್ನಿಗೆ ನಿಲ್ಲಬೇಕಿದ್ದ ಅರಣ್ಯ ರಕ್ಷಕರು ಹೆಣ್ಣು ಹುಲಿಗೆ 'ನರಭಕ್ಷಕ' ಎಂದು ಪಟ್ಟ ಕಟ್ಟಿದರು. ಪ್ರಕರಣ ನ್ಯಾಯಾಲಯಕ್ಕೆ ಬಂದು ತಲುಪಿತು. ಇಡೀ ವ್ಯವಸ್ಥೆ ಅವನಿಯ ವಿರುದ್ಧ ನಿಂತಂತಿತ್ತು. ಕೊನೆಗೆ, ಅವನಿಗೆ ಮರಣ ದಂಡನೆ ವಿಧಿಸಲಾಯಿತು.

ಅವನಿಯು ತನ್ನ ವಾಸಸ್ಥಾನದ ರಕ್ಷಣೆಗಾಗಿ ಜನರಲ್ಲಿ ಭಯ ಹುಟ್ಟಿಸಲು ಪ್ರಯತ್ನಿಸಿದ್ದಳೇ ಹೊರತು, ಅವಳದ್ದು ನರಭಕ್ಷಕ ಪ್ರವೃತ್ತಿಯಲ್ಲ ಎಂದು 'ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ'ದ ವರದಿ ಹೇಳುತ್ತಿದೆ. ಆದರೆ, ಅಭಿವೃದ್ಧಿ ಪಥದ ದೂಳು ಅವನಿಯ ಪರವಾದ ವಾದಗಳ ಮೇಲೆ ಗಾಢವಾಗಿ ಕವಿದಿತ್ತು. ಅವನಿಗೆ ಗುಂಡಿಕ್ಕಲು ಪಡೆಯೊಂದು ಕಾಡು ಪ್ರವೇಶಿಸಿತು.

ಅವನಿ ಅಲಿಯಾಸ್ 'ಟಿ–1' ಹುಲಿಗಾಗಿ ಶಸ್ತ್ರಸಜ್ಜಿತ ತಂಡವೊಂದು ಹುಡುಕಾಟ ಆರಂಭಿಸಿತು. ಈ ಕಾರ್ಯಾಚರಣೆಗಾಗಿ 100 ಕಣ್ಗಾವಲು ಕ್ಯಾಮೆರಾಗಳನ್ನು ಹುಲಿ ನಡೆಯುವ ದಾರಿಯುದ್ದಕ್ಕೂ ಬಚ್ಚಿಡಲಾಗಿತ್ತು. ಕಾಡು ಪ್ರಾಣಿಗಳನ್ನು ಆಕರ್ಷಿಸಲೆಂದು ಕೆಲ್ವಿನ್ ಕ್ಲೇನ್ ಎಂಬ ಸುಗಂಧ ದ್ರವ್ಯವನ್ನು ಕಾಡಿನೆಲ್ಲೆಡೆ ಸಿಂಪಡಿಸಲಾಗಿತ್ತು, ಈ ಹಿಂದೆ ಅಮೆರಿಕದಲ್ಲಿ ಚಿರತೆಗಳನ್ನು ಸೆರೆ ಹಿಡಿಯಲು ಈ ದ್ರವ್ಯವನ್ನು ಬಳಸಲಾಗಿತ್ತು. ಇದರಲ್ಲಿ ಸಿವೆಟಾನ್ ಎಂಬ ಫೆರೊಮೋನ್ ಇದ್ದು, ಬೆಕ್ಕಿನ ಜಾತಿಗೆ ಸೇರಿದ ಮೃಗಗಳು ಇದಕ್ಕೆ ಹೆಚ್ಚು ಆಕರ್ಷಿತವಾಗುತ್ತವೆ. ಇನ್ನೂ ಕೆಲವು ಬಾರಿ, ಅದೇ ಪ್ರಾಣಿಗಳ ಮೂತ್ರವನ್ನು ಸಿಂಪಡಿಸುವುದರಿಂದಲೂ ವನ್ಯಜೀವಿಗಳನ್ನು ಸೆರೆ ಹಿಡಿಯಲು ಅನುಕೂಲವಾಗುತ್ತದೆ. ಅವನಿಯನ್ನು ಹುಡುಕಲೆಂದು ಡ್ರೋನ್‌ಗಳನ್ನು ಹಾರಿ ಬಿಡಲಾಗಿತ್ತು, ಅವು ಕ್ಷಣ ಕ್ಷಣಕ್ಕೂ ಕಾಡಿನ ಚಿತ್ರಣಗಳನ್ನು ಕಳುಹಿಸಿಕೊಡುತ್ತಿದ್ದವು. ಬೇಟೆಗಾಗಿ ಬಳಸುವ ಪ್ಯಾರಾಗ್ಲೈಡರ್, ಇನ್ಫ್ರಾರೆಡ್ ಕ್ಯಾಮೆರಾಗಳನ್ನು ಬಳಸಲಾಗಿತ್ತು. ಪತ್ತೆದಾರಿಯಲ್ಲಿ ಪಳಗಿದ್ದ ನಾಯಿಗಳು ಹಾಗೂ ಕುರಿ ಕುದುರೆಗಳನ್ನು ಕಾರ್ಯಾಚರಣೆಯಲ್ಲಿ ಬಳಸಲಾಗಿತ್ತಂತೆ.

## ತಬ್ಬಲಿಯಾದವು ಮರಿಗಳು...

ಕಾಡಿನಲ್ಲಿ ಅವಿತು ಕುಳಿತಿದ್ದ ಕ್ಯಾಮೆರಾ ಕಣ್ಣುಗಳು ಅವನಿಯ ಚಟುವಟಿಕೆಗಳನ್ನು ಗುಟ್ಟಾಗಿ ವೀಕ್ಷಿಸುತ್ತಿದ್ದವು. ಅವಳು ತನ್ನ ಮರಿಗಳಿಗೆ ಹಾಲುಣಿಸುವ ದೃಶ್ಯ, ಕೆರೆಯಲ್ಲಿ ನೀರು ಕುಡಿಯುವ ದೃಶ್ಯ, ಮರಿಗಳು ಆಡಿ ನಲಿಯುತ್ತಿದ್ದ ದೃಶ್ಯ, ಒಂದೇ ಎರಡೇ...

ಆ ರಾತ್ರಿ ತನ್ನ ಮರಿಗಳಿಗೆ ಹಾಲುಣಿಸಿದ ಅವನಿ, ಮರಿಗಳನ್ನು ಬೆಚ್ಚಗಿನ ಜಾಗದಲ್ಲಿ ಮಲಗಿಸಿದಳು. ನಂತರ, ನಿಧಾನವಾಗಿ ಕಾಡಿನಲ್ಲಿ ಹೆಜ್ಜೆ ಹಾಕತೊಡಗಿದಳು. ಸಾವು ಗುಂಡಿನ ರೂಪದಲ್ಲಿ ಎದುರಾಯಿತು. ತಾಯಿ ನೆಲಕ್ಕುರುಳಿದ್ದಳು. ಆ ಎರಡು ಹುಲಿ ಮರಿಗಳು ಅನಾಥವಾಗಿದ್ದವು. ನಿನ್ನೆ ಇದ್ದ ಅಮ್ಮ ಬೆಳಗಾಗುವ ವೇಳೆಗೆ ಇಲ್ಲವಾಗಿದ್ದಳು. ಅವನಿಯನ್ನು ಆರು ವರ್ಷಗಳಿಂದ ಕಂಡ ಕಾಡು ನಿಶ್ಶಬ್ದವಾಗಿತ್ತು.

ಹುಲಿಗಳ ರಕ್ಷಣೆಗೆಂದು ಹುಲಿ ಸಂರಕ್ಷಣಾ ಪ್ರಾಧಿಕಾರವಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆಗಳಿವೆ. ಆದರೆ, ಅವನಿಯ ರಕ್ಷಣೆಗೆ ಯಾವುದೂ ನೆರವಿಗೆ ಬರಲಿಲ್ಲ. ಅರಿವಳಿಕೆ ಮದ್ದನ್ನು ನೀಡಿ ಹುಲಿಯನ್ನು ಸೆರೆ ಹಿಡಿಯಬಹುದಿತ್ತು. ಅಷ್ಟು ದಯೆಯನ್ನು ಯಾರೂ ತೋರಲಿಲ್ಲ. ಹುಲಿಯನ್ನು ಬಲವಂತವಾಗಿ ಸ್ಥಳಾಂತರ ಮಾಡಲು ಪ್ರಯತ್ನಿಸಬಹುದಿತ್ತು. ಆ ಸಾವಧಾನವೂ ವ್ಯವಸ್ಥೆಗೆ ಉಳಿದಂತಿರಲಿಲ್ಲ.

ಅವನಿ ಬಲಿಯಾಗಿ ಹೋದಳು — ಮನುಷ್ಯನ ಸ್ವಾರ್ಥಕ್ಕೆ, ವ್ಯವಸ್ಥೆಯ ಕುರುಡುತನಕ್ಕೆ. ಸಂರಕ್ಷಿತ ಪ್ರದೇಶದಲ್ಲೇ ಅವಳ ಹತ್ಯೆ ನಡೆದುಹೋಯಿತು. ಮಾನವೀಯತೆಯ ಹೂದೋಟದಲ್ಲಿ ಗೋರಿಯೊಂದು ರೂಪುಗೊಂಡಿತು.

ಅವನಿಯ ಬಲಿದಾನದಿಂದ ಈ ಸಮಾಜ ಏನನ್ನಾದರೂ ಕಲಿತಿದೆಯೆ? ಸಾವಿನಿಂದಲೂ ಪಾಠ ಕಲಿಯದೆ ಹೋದರೆ, ಸಾವೇ ನಮಗೆ ಪಾಠ ಕಲಿಸುತ್ತದಲ್ಲವೆ?




ಪ್ರತಿಕ್ರಿಯಿಸಿ: feedback@sudha.co.in